ಝೂಲಾ ಹೊದಿಸಿ ಸಿಂಗಾರ ಮಾಡುತ್ತಿದ್ದರು. ಈ ದಪ್ಪ ದುಬಟಿಯ ಮೇಲೆ ಶಿವಲಿಂಗ, ಬಸವಣ್ಣನ ಚಿತ್ರಗಳಿರುತ್ತಿದ್ದವು.

ಚಕ್ಕಡಿ ಗಾಲಿಗಳ ಕೀಲುಗಳಿಗೆ ಕಿರುಗೆಜ್ಜೆಯ ಗುಚ್ಛವನ್ನು ಕಟ್ಟುತ್ತಿದ್ದರು. ಚಕ್ಕಡಿ ಸಾಗುವಾಗ ಗಾಲಿಗಳು ಉರುಳುವಾಗ ಗೆಜ್ಜೆಗಳ ಗಿಲ್ ಗಿಲ್ ನಾದ ಲಯಬದ್ಧವಾಗಿ ಕೇಳಿ, ಮನಕೆ ಮುದ ನೀಡುತಿತ್ತು. ದೂರ ದಾರಿ ಸವೆದದ್ದೂ ತಿಳಿಯುತ್ತಿರಲಿಲ್ಲ. ಎತ್ತುಗಳ ಹೆಜ್ಜೆಗಳ ತಾಳಕ್ಕೆ ಕುಣಿಯುತ್ತ ಅವುಗಳ ಕೊರಳೊಳಗಿನ ಗಂಟೆಗಳ ಲಯಬದ್ಧವಾಗಿ ಬಾರಿಸುವ ಕಿಣಿ ಕಿಣಿ ಕಿಂಕಿಣಿ ನಾದ, ಅಕ್ಕಪಕ್ಕದ ಹಸಿರು ಹೊಲ ಗದ್ದೆ, ಗಿಡ ಮರ, ಚಿಲಿಪಿಲಿ ಹಕ್ಕಿ ಪಿಕ್ಕಿಗಳ ಕೂಜನ, ಕಾಡಿನ ಆ ದಾರಿ, ನಾವು ಅಜ್ಜಿ ಹೇಳುವ ಕಥೆಗಳಲ್ಲಿ ಕೇಳಿದ ಯಕ್ಷ ಗಂಧರ್ವ ಲೋಕದಲ್ಲಿ ತೇಲುವ ಮಧುರ ಅನುಭೂತಿ ನೀಡುತಿತ್ತು. ಹಾದಿಯ ಆಜುಬಾಜು ಬೆಳೆದ ಕವಳಿ ಕಾಯಿ, ಬಾರೀ ಹಣ್ಣು, ಕಾಕಿ ಹಣ್ಣು ಹರಕೊಂಡು ಮಡಲಾಗ ತುಂಬಿಕೊಂಡು ತಿನಕೊಂತ, ಕಾಡು ಹೂಗಳನ್ನು ಹರಿದು ತಲ್ಯಾಗ ಮುಡಕೊಳ್ಳೂ ಸಡಗರಾ ಬ್ಯಾರೆ ನಮಗ್... ಹಿರ್ಯಾರ ಕಡೆ ಬೈಸಿಕೊಂತ ಚಕ್ಕಡಿ ಹಿಂದ ಹಿಂದ ನಡಕೊಂತ ಹೊಂಟಾಗ ಮಜಾ ಮಾಡ್ಕೊಂತಾ ಹೋಗ್ತೀದ್ವಿ.

ಜಾತ್ರ್ಯಾಗ ಸಣ್ಣಮಕ್ಕಳು ಕಳಕೊಳ್ಳೋದು ಮತ್ತ ಸಿಗೋದು ಸಾಮಾನ್ಯವಾಗಿ ಇದ್ದೇ ಇರ್ತದ. ಆದ್ರ ನನ್ನ ತಮ್ಮ ಜಾತ್ರ್ಯಾಗ ಕಳಕೊಂಡಿದ್ದು ಮತ್ತ ಸಿಕ್ಕಿದ್ದು ಸ್ವಲ್ಪ ವಿಚಿತ್ರ. ಅದೇನಂತ ಹೇಳತೇನ ಕೇಳ್ರಿ...

ಧಾರವಾಡದ ಮುರುಘಾಮಠದ ಜಾತ್ರೆಗೆ ಅಂತ ನಮ್ಮ ಹಂಸಭಾವಿಯಿಂದ ಭಾಳ ಜನಾ ನಮ್ಮ ಮನಿಗೆ ಬರ್ತಿದ್ರು. ನಮ್ಮ ಮನ್ಯಾಗ ಜನಜಾತ್ರಿನ ಆಗ್ತಿತ್ತು ಆವಾಗ. ಬಂದವರೆಲ್ಲಾ ಜಳಕಾ ಆದ ಮ್ಯಾಗ ಅವ್ವನ ಊಟ ಉಪಚಾರ ಮುಗಿಸಿಕೊಂಡು ಜಾತ್ರಿಗೆ ಹೊರಡತಿದ್ರು. ಎಲ್ಲಾರೂ ಹೋದ ಮ್ಯಾಗ ಅವ್ವ ಕಡೀಕ ನಾನು ಮತ್ತ ನನ್ನ ತಮ್ಮ ಹಾಗೂ ಬಾಜುಮನ್ಯಾಗ ಇರತಿದ್ದ ನನ್ನ ವಾರಗೀ ಗೆಳತಿ, ಆಮ್ಯಾಗ ನನ್ನ ಸ್ವಾದರತ್ತಿ ಎಲ್ಲ ಕೂಡಿ ಹೋಗುದಂತ ನಕ್ಕಿ ಮಾಡಿದ್ಲು. ಎಲ್ಲಾರೂ ತಯಾರಾಗಿ ಮನಿ ಹೊರಗ ಬಂದು ಬಾಗ್ಲಿಗೆ ಕೀಲೀ ಹಾಕುವಾಗ ನೋಡಿದ್ರ ನನ್ನ

ಕರ್ನಾಟಕದ ವಿವಿಧ
ಜಿಲ್ಲೆಗಳ ನುಡಿಸೊಬಗನ್ನು
ಪರಿಚಯಿಸುತ್ತಿರುವ 'ಚೆನ್ನುಡಿ'
ಅಂಕಣಕ್ಕೆ ನೀವೂ ಬರೆಯಬಹುದು.
ನಿಮ್ಮೂರಿನ ಭಾಷೆಯ ಸೊಗಡನ್ನು
ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ
1000 ಪದಮಿತಿಯಲ್ಲಿ, ನುಡಿ ಅಥವಾ
ಯುನಿಕೋಡ್‌ನಲ್ಲಿರಲಿ.
ಇಮೇಲ್–
**editorsu@sudha.co.in**

ತಮ್ಮ ಇರಲಿಲ್ಲ. ಆವಾಗ ನನ್ನ ಸ್ವಾದರತ್ತಿ 'ಅಯ್ಯ ಹುಡುಗನ್ನ ನಿಂಬೆಮ್ಮ( ಊರಿಂದ ಬಂದ ದೂರದ ಸಂಬಂಧಿ) ತಾವು ಹೋಗುವಾಗ ಮೊದ್ಲ ತಮ್ಮ ಜೊತೆಗ ಕರ್ಕೊಂಡು ಹೋಗ್ಯಾರ' ಅಂದ್ಲು. ಆತು ಬಿಡು ಹಂಗಾರ ಅಂತ ಅನ್ಕೊಂತಾ ನಾವೆಲ್ಲರೂ ಜಾತ್ರೆಗೆ ಹೋದ್ವಿ... ಧಾರವಾಡದ ಹಾವೇರಿ ಪ್ಯಾಟ್ಯಾಗ ಹಾಸಿ ಮುಂದ ಮೃತ್ಯುಂಜಯಪ್ಪಗಳ ಮಠಕ್ಕೆ ಹೋಗಬೇಕು. ಅಲ್ಲೇ ಗೊತ್ತಿರುವವರ ಒಬ್ಬರ ಮನೆಯಲ್ಲಿ ನಮ್ಮನಿಗೆ ಬಂದ ಎಲ್ಲಾ ಜನರೂ ಸೇರತಿದ್ದರು. ಅವ್ವ ಅಲ್ಲಿಗೆ ಹೋದ ಕೂಡಲೇ 'ಬಾಬು ಎಲ್ಲದಾನು?' ಅಂದ್ಲು.

ನನ್ನ ತಮ್ಮಗ ಪ್ರೀತಿಯಿಂದ ಹಾಂಗ ಕರೀತಿದ್ರು. ಎಲ್ಲಾರೂ ಒಬ್ಬರ ಮಕಾ ಒಬ್ಬರು ನೋಡಿ ಇಲ್ಲಾ ಹುಡುಗ ನಮ್ಮ ಜ್ವಾಡಿ ಬಂದಿಲ್ಲಾ ಅಂದಾಗ ಅವ್ವ ಗಾಬರಿ ಆಗಿ 'ಎಲ್ಲಿ ಹೋತ ಹುಚ್ಕೋಡಿ ಸಣ್ಣದು ಅಂತ ಅನಕೋತಾ. ನೀವು ಎಲ್ಲಾರೂ ತೇರು ಎಳೆಯೋದು ನೋಡಿ ಹಣಕಾಯಿ ಮಾಡಿಸ್ಕೊಂಡು ಬರ್ರಿ. ನಾ ವಾಪಸ್ ಮನಿಗೆ ಹೋಗಿ ಅವನ್ನ ಹುಡುಕತೀನಿ' ಅಂತ ಹೇಳಿದಾಕಿನ ನಿಂತಲ್ಲಿಂದನ ಮಠದ ಕಡೆ ಮಕಾ ಮಾಡಿ ಉದ್ದಕ ಸಾಷ್ಟಾಂಗ ನಮಸ್ಕಾರ ಹಾಕಿ 'ಅಜ್ಜಾ ನೀನ ಕಾಪಾಡಪ್ಪಾ' ಅಂದು ನನ್ನ ಕೈ ಹಿಡಿದು ಎಳಕೊಂತಾ ಮನೀಕಡೆಗೆ ಹೊರಟ್ಲು.

ದಾರಿ ಒಳಗ ಭೆಟ್ಟಿ ಆದವರ್ನೆಲ್ಲಾ 'ನನ್ನ ಮಗಾ ಬಾಬುನ್ನ ನೋಡಿದ್ರೀನ' ಅಂತ ಕೇಳಿದ್ದ ಕೇಳಿದ್ದು. ನಾನು ಸಹಿತ 'ನಮ್ಮ ತಮ್ಮ ಆಡಾಕ್ ಬಂದಾನೇನು? ನಿಮ್ಮ ಮನ್ಯಾಗ ಅದಾನೇನು?' ಅಂತ ಆಜುಬಾಜು ಮನಿಯಾಗ ಕೇಳಿ ಓಣಿಯೊಳಗ ಹುಡುಕಿ ಬಂದೆ. ಎಲ್ಲೂ ಸಿಗಲಿಲ್ಲ. ನಂಗೂ ತಮ್ಮನ್ನ ಕಳಕೊಂಡ ದುಃಖ ಒತ್ತರಿಸಿ ಬಂದು ಸಣ್ಣಕ ಅಳಲಿಕ್ಕೆ ಶುರು ಮಾಡಿದೆ. ಅಪ್ಪಾಜಿ ಮತ್ತು ಅವ್ವ ಕಡೀಕ ಇನ್ನ ಪೊಲೀಸ್ ಕಂಪ್ಲೆಂಟ್ ಕೊಡಬೇಕಂತ ಹೊಂಟಿದ್ರು.

ಅಷ್ಟೊತ್ತಿಗೆ ನಡಮನ್ಯಾಗ ಧಪ್ಪ ಅಂತ ಏನೋ ಕೆಳಗ ಬಿದ್ದ ಸಪ್ಪಳಾ ಕೇಳಿ ಒಳಗ ಹೋಗಿ ನೋಡಿದ್ರ, ಜಾತ್ರೆಗೆ ಬಂದ ನಮ್ಮ ಸಂಬಂಧಿಕರು ರಾತ್ರಿ ಮಲಗೆದ್ದು ಮುಂಜಾನೆ ಅಲ್ಲಿ ಒಂದರ ಮ್ಯಾಗ ಒಂದ ಸುತ್ತಿಟ್ಟಿದ್ದ ಹತ್ತಿಪ್ಪತ್ತ ಗಾದಿಸುರುಳಿ ಹೊತ್ಗೊಂಡು ಈ ಕಡೆ ನೆಲದ ಮ್ಯಾಗ ಕೆಳಗ ಉರುಳಿ ಬಿದ್ದಿದ್ದವು... ಆ ಕಡೆ ಪಲ್ಲಂಗದ ಮ್ಯಾಗ ಮಸ್ತ್ ಗಡದ್ದ ನಿದ್ದಿ ಹೊಡದು ಎದ್ದುಕುಂತ ನನ್ನ ಪುಟ್ಟ ತಮ್ಮ 'ಅವ್ವಾ ಎತ್ತಿಕೋ' ಅಂತ ತನ್ನೆರಡೂ ಕೈಗಳನ್ನು ಚಾಚಿದ್ದ. 'ಕಂಕುಳದಾಗ ಕೂಸು ಇಟ್ಟುಕೊಂಡು ಊರೆಲ್ಲಾ ಹುಡುಕಿದಂತೆ' ಹಾಂಗ ಆಗಿತ್ತು ನಮ್ಮ ಪರಿಸ್ಥಿತಿ.

ಇನ್ನೊಂದು ಘಟನೆ ಧಾರವಾಡದ ರವಿವಾರ ಪ್ಯಾಟಿಯೊಳಗ ಶ್ರೀ ಲಕ್ಷ್ಮೀನಾರಾಯಣ ಜಾತ್ರ್ಯಾಗ ನಡದದ್ದು. ಇಂಥದ್ದು ಸಿಗಂಗಿಲ್ಲ ಅನ್ನೋ ಹಾಂಗ ಇಲ್ಲಾ ಈ ಜಾತ್ರ್ಯಾಗ. ನನಗ ಮಣ್ಣಿನಿಂದ ಮಾಡಿದ ಪುಟ್ಟ ಒಲೆ ಹಾಗೂ ಅಡುಗೆ ಮನೆಯ ಪಾತ್ರೆ ಪಡಗಗಳು, ಅರೆಯೋ ಕಲ್ಲು, ರುಬ್ಬೋ ಗುಂಡು, ಹಂಚು, ಹುಟ್ಟು, ಬೋಗುಣಿ ಎಲ್ಲಾ ಮಣ್ಣಿನವು... ಸಣ್ಣ ಹುಡುಗರು ಆಟ ಆಡಲಿಕ್ಕೆ ಅಂತಾನೇ ಮಾಡಿದವು. ಅವ್ವನ ಕಡಿಂದ ಅವನ್ನ ಖರೀದಿ ಮಾಡಿಸ್ಕೊಂಡು ಜ್ವಾಕಿಯಿಂದ ಮನಿಗೆ ತಗೊಂಡು ಬರ್ತಿದ್ದೆ. ಬಣ್ಣ ಬಣ್ಣದ ದೊಡ್ಡ ದೊಡ್ಡ ಪುಗ್ಗಾ (ಬಲೂನು) ಅಂದ್ರ ಭಾಳ ಪ್ರೀತಿ ನಂಗ. ಒಂದ್ಸಲಾ ಇದ ಜಾತ್ರ್ಯಾಗ ಅವ್ವ ನಂಗೊಂದು ನನ್ನ ತಮ್ಮಗೊಂದು ಹೀಲಿಯಂ ಗ್ಯಾಸ್ ತುಂಬಿದ ಬಲೂನು ಕೊಡಿಸಿದ್ಲು.

ಅದೇನಾತೋ ಏನೋ ನನ್ನ ಕೈಯಾಗಿಂದ ಬಲೂನು ಮ್ಯಾಗ ಹಾರಿ ಹೋಗಿ ಬಿಡ್ತು. ತಮ್ಮನ ಕೈಯಾಗ ಹಾರಾಡ್ತಾ ಇದ್ದ ಬಲೂನ್ ಕಂಡು ಏನಾಯ್ತೋ ಗೊತ್ತಿಲ್ಲ. ಹಿಂದಿನಿಂದ ಹೋಗಿ ಅವನ ಕೈಯಾಗಿಂದ ದಾರ ಕಸ್ಗೊಂಡು ಬಲೂನ್ ಮ್ಯಾಗ ಹಾರಿ ಬಿಟ್ಟುಬಿಟ್ಟೆ. ತಮ್ಮ 'ನನ್ನ ಬಲೂನು... ನನ್ನ ಬಲೂನು...' ಅಂತ ಅಳಲಿಕ್ಕೆ ಶುರುಮಾಡಿದ.

